ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಬೆಂಗಳ
ಮತ್ತು ಮೈಸೂರು ಎಕ್ಸ್‌ಪ್ರೆಸ್ ಹೈವೆ ಬಗ್ಗೆ ಈ ಕೆಳಕಂಡ ಕಾಗದಪತ್ರಗಳನ್ನು ಸಭೆಯ ಮು
ಮಂಡಿಸುತ್ತೇನೆ. ಕರಾರಿನ ನಕಲು ಪ್ರತಿ, ತಾಂತ್ರಿಕ ವರದಿ ಪ್ರತಿ, ಸಂಬಂಧಿಸಿದ ಆದೇಶಗ
ನಡವಳಿಕೆಗಳು ಹಾಗೂ ಪತ್ರಗಳ ನಕಲುಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

+ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಮು
ಮಂಡಿಸಿರತಕ್ಕಂಥ ಅನೇಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ತಮ್ಮ ಮುಖೇನ ಸರ್ಕಾರಕ್ಕೆ ಕೆ
ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ ನಾವು ಸ್ವಾತಂತ್ರ್ಯ ಸುವರ್ಣ ಮಹೋತ್ಸವ
ಆಚರಿಸುತ್ತಿದ್ದೇವೆ. ಅತ್ಯಂತ ಸಂತೋಷದಿಂದ ಆಚರಿಸುವಂಥ ಸಂದರ್ಭದಲ್ಲಿ ನಾವೆಲ್ಲರೂ ಕ
ಕುಳಿತು ಚರ್ಚೆ ಮಾಡಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ದೇಶ ಎದುರಿಸುತ್ತಿದ್ದ ಸಮಸ್ಯೆ, ಸ್ವಾತಂ
ನಂತರ ಎದುರಿಸತಕ್ಕಂಥ ಸಮಸ್ಯೆಗಳು ಏನು ಎಂಬುದರ ಬಗ್ಗೆ ಕೆಲವು ಮಾತುಗಳನ್ನಾದರೂ ನ
ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಬಹುಶಃ 33 ಕೋಟಿಯಿಂದ 100 ಕೋಟಿ ಜನಸಂಖ್ಯೆಯನ್ನು ನ
ತಲುಪಿರುವಂಥ ಸಂದರ್ಭದಲ್ಲಿ ಈ ದೇಶಕ್ಕೆ ಬಂದಂಥ ಸ್ವಾತಂತ್ರ್ಯದ ಪ್ರತಿಫಲ ನಿಜವಾಗಿಯೂ ಕ
ಯಾರಿಗೆ ದಕ್ಕಿತು ಎನ್ನತಕ್ಕಂಥದ್ದು ಬಹಳ ಮುಖ್ಯವಾಗಿರತಕ್ಕಂಥ ವಿಷಯ. ಇವ್ಹೊತ್ತು 50 ವರ್ಷಗ
ನಾವು ಮಾಡಿರತಕ್ಕ ಸಾಧನೆ ಆದರೂ ಕೂಡ ಏನು? ನಿಜವಾಗಿಯೂ ಕೂಡ ಇವ್ಹೊತ್ತು ಸಾಧನ
ಫಲ ಯಾರಿಗೆ ತಲುಪಬೇಕಾಗಿದೆ ಅವರಿಗೆ ತಲುಪಿದೆಯೆ ಎಂಬುದು ಬಹಳ ಮುಖ್ಯವಾಗಿರತಕ್ಕಂಥ
ಅಧ್ಯಕ್ಷರೆ, ಈಗ ಈ ದೇಶದಲ್ಲಿ ಪೂರ್ವದಲ್ಲಿ ಇರಬಹುದು ಅಥವಾ ನಂತರದಲ್ಲಿ ಇರಬಹು
ಇವ್ಹೊತ್ತು ಈ ದೇಶದ ಜನ ನಂಬಿರತಕ್ಕಂಥದ್ದು ಎರಡು ಉದ್ಯಮದ ಮೇಲೆ. ಶೇಕಡ 80 ರಷ್ಟು
ಈ ದೇಶದಲ್ಲಿ ಕೃಷಿಯನ್ನೇ ನಂಬಿರತಕ್ಕಂಥದ್ದು. ಇನ್ನು ಕೆಲವರು ಬೇರೆ ಇರಬಹುದು. ಆದರೆ, ಆದ
ಏನಾದರೂ ಕೂಡ ಬದಲಾವಣೆ ಆಗಿದೆಯೆ? ಇವ್ಹೊತ್ತು ನಮಗೆ ಸ್ವಾತಂತ್ರ್ಯಾನಂತರ ಆಗಿರತಕ್ಕಂಥದ್ದ
ನಾವು ಇವ್ಹೊತ್ತು ಎದುರಿಸತಕ್ಕಂಥ ಸಮಸ್ಯೆ ಆದರೂ ಕೂಡ ಏನು ಎಂಬ ಬಗ್ಗೆ ಚಿಂತನೆ ಮಾಡಬೆ
50 ವರ್ಷಗಳಲ್ಲಿ ನಾವು ಮಾಡಿರತಕ್ಕಂಥ ಸಾಧನೆಗಳು ಏನು ಎನ್ನತಕ್ಕಂಥದ್ದರ ಬಗ್ಗೆ ಕೆ
ವಿಷಯಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಾವು ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಕಾರ್ಖಾನೆಗ
ಸ್ಥಾಪನೆ ಮಾಡಿದೆವು. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇವ್ಹೊತ್ತು ದೇಶಮಟ್ಟದಲ್ಲಿ ಇರಬಹು
ರಾಜ್ಯಮಟ್ಟದಲ್ಲಿ ಇರಬಹುದು. ಇವ್ಹೊತ್ತು ಅದು ಮಾಡಿರತಕ್ಕಂಥ ಸಾಧನೆಗಳ ಬಗ್ಗೆ ನ
ವಿಚಾರಮಾಡುತ್ತಾ ಹೋದರೆ ಬಹುಶಃ ಈ ದೇಶದ ಆರ್ಥಿಕ ಪರಿಸ್ಥಿತಿ ಕುಸಿದುಹೋಗುವುದಕ್ಕೆ ಮು
ಕಾರಣ ಏನು ಎನ್ನತಕ್ಕಂಥದ್ದರ ಬಗ್ಗೆ ನಮಗೆ ಅರ್ಥವಾಗುತ್ತದೆ. ಇವ್ಹೊತ್ತು ನಮ್ಮ ಪಬ್ಲಿಕ್ ಅಂಡರ್‌ಟೇಕಿ